UNIVERSITY LIBRARY
FRIDAY 22-05-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

ಕೃಷಿಕರಿಗೆ ಕಾಡುತ್ತಿದೆ ಕೂಲಿಕಾರ್ಮಿಕರ ಸಮಸ್ಯೆ

ಡಿಜಿಟಲ್ ತಂತ್ರಜ್ಞಾನದಿಂದ ಕೃಷಿಗೆ ಹೊಸ ಕಾಯಕಲ್ಪ: ಕೃಷಿ ವಿವಿ ಕುಲಪತಿ ಸುರೇಶ್

ಸಂ.ಕ.ಸಮಾಚಾರ, ಬೆಂಗಳೂರು

ಇತ್ತೀಚಿನ ದಿನಗಳಲ್ಲಿ ಕೃಷಿಕರನ್ನು ಬಿಂಬಿಡದೆ ಕಾಡುತ್ತಿರುವ ಸಮಸ್ಯೆಗಳಲ್ಲಿ ಕೂಲಿಕಾರ್ಮಿಕರ ಕೊರತೆಯು ಒಂದಾಗಿದೆ ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಆತಂಕ ವ್ಯಕ್ತಪಡಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಏರೋಸೈಟ್ ಟೆಕ್ನಾಲಜೀಸ್ ಹಾಗೂ ಕ್ರಾಪ್‌ಲೈಫ್ ಇಂಡಿಯಾ ಇವರ ಸಹಯೋಗದೊಂದಿಗೆ ಜಿಕೆವಿಕೆಯಲ್ಲಿ ಆಯೋಜಿಸಲಾಗಿದ್ದ ವಿನೂತನ ಡ್ರೋನ್ ದೀದಿ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ರೈತರು ಕೃಷಿ ಮಾಡಲು ಉತ್ಸುಕವಾಗಿದ್ದಾರೆ. ಆದರೆ ಅವರಿಗೆ ಸಕಾಲಕ್ಕೆ ಕೂಲಿಕಾರ್ಮಿಕರು ಸಿಗದೆ ಬೆಳೆಗಳನ್ನು ಮಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು ಕೆಲವರು ಕೃಷಿ ಮಾಡದೆ ಹಾಗೆಯೇ ಉಳಿದಿದ್ದಾರೆ ಎಂದು ತಿಳಿಸಿದರು.

ಇಂತಹ ಪರಿಸ್ಥಿತಿಯಲ್ಲಿ ಕೃತಕ ಬುದ್ಧಿಮತ್ತೆ, ಆಧುನಿಕ ಯಂತ್ರೋಪಕರಣ/ತಂತ್ರಜ್ಞಾನಗಳ ಬಳಕೆ ಹಾಗೂ ಡಿಜಿಟಲ್ ತಂತ್ರಜ್ಞಾನವು ಕೃಷಿಗೆ ಹೊಸ ಕಾಯಕಲ್ಪ ನೀಡಬಲ್ಲವು. ಕೃಷಿ ವಿಶ್ವವಿದ್ಯಾನಿಲಯ ಮಹಿಳೆಯರಿಗಾಗಿಯೇ ಹಮ್ಮಿಕೊಂಡಿರುವ 'ನಮೋ ಡ್ರೋನ್ ದೀದಿ' ತರಬೇತಿ ಕಾರ್ಯಕ್ರಮವು ಮಹಿಳಾ ಸಬಲೀಕರಣಕ್ಕೆ ಹೊಸ ದಿಕ್ಸೂಚಿಯ ಜೊತೆಗೆ ಕ್ರಾಂತಿಕಾರಕ ಬೆಳವಣಿಗೆಯಾಗಿದೆ ಎಂದರು.

ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಡಾ.ಶಿವಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ರೈತರು ಕಾರ್ಮಿಕರ ಕೊರತೆಯಿಂದ ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಜೊತೆಗೆ ಕೃಷಿಕರು ತಮ್ಮ ಭೂಮಿಗೆ ರಸಗೊಬ್ಬರ ಸೇರಿ ಕೀಟನಾಶಕಗಳನ್ನು ಯಾವ ಪ್ರಮಾಣದಲ್ಲಿ ಕೊಡಬೇಕು ಎಂಬ ಮಾಹಿತಿ ಕೊರತೆ ಕೂಡ ಇದೆ. ಈ ನಿಟ್ಟಿನಲ್ಲಿ ಅರಿವು ನೀಡುವ ಜೊತೆಗೆ ಆಧುನಿಕ ಯಂತ್ರೋಪಕರಣಗಳ ಬಳಕೆ ಹಾಗೂ ಡ್ರೋನ್‌ಗಳ ಬಳಕೆಯ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆಗಳಾಗಬೇಕು ಎಂದು ತಿಳಿಸಿದರು.



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಏರೋಸೈಟ್ ಟೆಕ್ನಾಲಜೀಸ್ ಹಾಗೂ ಕ್ರಾಪ್‌ಲೈಫ್ ಇಂಡಿಯಾದ ಸಹಯೋಗದೊಂದಿಗೆ ಜಿಕೆವಿಕೆಯಲ್ಲಿ ಆಯೋಜಿಸಲಾಗಿದ್ದ ವಿನೂತನ ಡ್ರೋನ್ ದೀದಿ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ವಿವಿ ಕುಲಪತಿ ಸೇರಿ ಗಣ್ಯರು ಪಾಲ್ಗೊಂಡಿದ್ದರು.

ರಾಷ್ಟ್ರೀಯ ಸಂಜೀವಿನಿ ಕೌಶಲ್ಯಭಿವೃದ್ಧಿ ಮಿಷನ್ ಮುಖ್ಯಸ್ಥ ವೇಣುಗೋಪಾಲ್.ಎನ್.ಆರ್, ಏರೋಸೈಟ್ ಟೆಕ್ನಾಲಜೀಸ್ ಲಿಮಿಟೆಡ್‌ನ ಸಿ.ಇ.ಓ ಗೋಪಿನಾಥ್ ರಾಮಚಂದ್ರನ್, ಜಂಟಿ ಕೃಷಿ ನಿರ್ದೇಶಕ ಮುಖ್ಯಸ್ಥ ಡಾ.ಮೂಡಲಗಿರಿಯಪ್ಪ ಮತ್ತಿತರರಿದ್ದರು.

S-karnataka pg 04

ವಿ ರೈತ ಮಿತ್ರ

Vijayavani pg 13

ತೆಂಗಿನ ಗರಿಗಳಿಂದ ಎರೆಹುಳು ಗೊಬ್ಬರ ತಯಾರಿಕೆ ಮಾಡುವುದು ಹೇಗೆ?

ವೈಜಯಂತಿ ಚಿತ್ರದುರ್ಗ

ತೆಂಗಿನ ಗರಿಗಳಿಂದ ಎರೆಹುಳು ಗೊಬ್ಬರದ ತಯಾರಿಕೆ ಮಾಡುವ ವಿಧಾನ- ಸಿಮೆಂಟ್ ತೊಟ್ಟಿಗಳಲ್ಲಿ ಅಥವಾ ಭೂಮಿಯಲ್ಲಿ ಗುಂಡಿಗಳನ್ನು ಮಾಡಿ ಎರೆಗೊಬ್ಬರ ತಯಾರಿಸಬಹುದು. ಗೊಬ್ಬರದ ತಯಾರಿಕೆಗೆ 3-4 ತಿಂಗಳು ಚೆನ್ನಾಗಿ ಒಣಗಿದ ಗರಿಗಳನ್ನು ಆಯ್ಕೆಮಾಡಿಕೊಳ್ಳಬೇಕು. ಒಂದು ಟನ್ ತ್ಯಾಜ್ಯವನ್ನು 100 ಕಿ.ಗ್ರಾಂ ಸಗಣಿಯ ಬಗ್ಗಡದಿಂದ ಉಪಚರಿಸಬೇಕು. ತ್ಯಾಜ್ಯಗಳನ್ನು 2-3 ತಿಂಗಳ ಕಾಲ ಕೊಳೆಯುವಿಕೆಗಾಗಿ ಬಿಡಬೇಕು. ಪ್ರತಿ ಟನ್ ತ್ಯಾಜ್ಯಕ್ಕೆ ಒಂದು ಕಿ.ಗ್ರಾಂ (1000 ಹುಳುಗಳು) ಎರೆಹುಳುಗಳನ್ನು ಬಿಡಬೇಕಾಗುತ್ತದೆ. ಪ್ರತಿ ನಾಲ್ಕು ದಿನಗಳಿಗೊಮ್ಮೆ ತ್ಯಾಜ್ಯಗಳ ಮೇಲೆ ನೀರನ್ನು ಚುಮುಕಿಸಬೇಕು. ತ್ಯಾಜ್ಯಗಳ ಮೇಲೆ ಹೊದಿಕೆ ಹಾಕಿ ತೇವಾಂಶ ಸಂರಕ್ಷಣೆ ಮಾಡಬೇಕು. ರೈನೋಸೆರಸ್ ದುಂಬಿಯ ನಿಯಂತ್ರಣಕ್ಕಾಗಿ ಗುಂಡಿಗಳನ್ನು ಬಲೆಯಿಂದ ಮುಚ್ಚಬೇಕು. ಸುಮಾರು 60-75 ದಿನಗಳ ನಂತರ ಎರೆಹುಳುಗೊಬ್ಬರ ತಯಾರಾಗಿರುತ್ತದೆ.



ಡಾ. ಎಂ.ಶಾಲಿನಿ ತೋಟಗಾರಿಕೆ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

ಮಹಿಳೆಯರು ಕೃಷಿ ಸುಧಾರಣೆಗೆ ಸಹಕರಿಸಿ

Hosadiganta pg 08

• ಬೆಂಗಳೂರು: ಆಹಾರ ಉತ್ಪಾದಕತೆಯನ್ನು ಸುಧಾರಿಸಲು, ಸಮಯ ಮತ್ತು ವೆಚ್ಚ ಉಳಿತಾಯ ಹಾಗೂ ಸುಧಾರಿತ ಬೆಳೆ ಇಳುವರಿಗೆ ಪೂರಕವಾಗಿ ಕೃಷಿಯಲ್ಲಿ ಕ್ರಾಂತಿಕಾರಕ ಬದಲಾವಣೆ ನಿಟ್ಟಿನಲ್ಲಿ, ಡ್ರೋನ್ ಬಳಕೆ ತರಬೇತಿ ಆಯೋಜಿಸಿದ್ದು, ಸ್ವಸಹಾಯ ಸಂಘದ ಮಹಿಳೆಯರು ಇದರ ಬಳಕೆ ಯೊಂದಿಗೆ ಕೃಷಿ ಸುಧಾರಣೆಗೆ ಕೊಡುಗೆ ನೀಡಬೇಕು ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ ತಿಳಿಸಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಏರೋಸೈಟ್ ಟೆಕ್ನಾಲಜೀಸ್ ಹಾಗೂ ಕ್ರಾಪ್‌ಲೈಫ್ ಇಂಡಿಯಾದ ಸಹಯೋಗದೊಂದಿಗೆ ಜಿಕೆವಿಕೆಯಲ್ಲಿ ಸ್ವಸಹಾಯ ಸಂಘಗಳ ಸದಸ್ಯರಿಗೆ ಆಯೋಜಿಸಿದ್ದ ವಿನೂತನ ಡ್ರೋನ್ ದೀದಿ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸ್ತುತ ಕೃಷಿ ಪರಿಸ್ಥಿತಿಯನ್ನು ಅವಲೋಕಿಸಿದಾಗ ನಮ್ಮ ಮುಂದೆ ಹವಾಮಾನ ವೈಪರಿತ್ಯ, ಕೂಲಿಕಾರ್ಮಿಕರ ಕೊರತೆ ಹಾಗೂ ಮಾರುಕಟ್ಟೆ ಸಮಸ್ಯೆಗಳು ಎದುರಾಗುತ್ತಿವೆಂದರು. ಇಂತಹ ಪರಿಸ್ಥಿತಿಯಲ್ಲಿ ಕೃತಕ ಬುದ್ಧಿಮತ್ತೆ, ಆಧುನಿಕ ಯಂತ್ರೋಪಕರಣ, ತಂತ್ರಜ್ಞಾನಗಳ ಬಳಕೆ ಹಾಗೂ ಡಿಜಿಟಲ್ ತಂತ್ರಜ್ಞಾನವು ಕೃಷಿಗೆ ಹೊಸ ಕಾಯಕಲ್ಪ ನೀಡಬಲ್ಲವು. ಕೃಷಿ ವಿಶ್ವವಿದ್ಯಾನಿಲಯ ಮಹಿಳೆಯರಿಗಾಗಿಯೇ ಹಮ್ಮಿಕೊಂಡಿರುವ ನಮೋ ಡ್ರೋನ್ ದೀದಿ ತರಬೇತಿ ಕಾರ್ಯಕ್ರಮವು ಮಹಿಳಾ ಸಬಲೀಕರಣಕ್ಕೆ ಹೊಸ ದಿಕ್ಸೂಚಿಯ ಜೊತೆಗೆ ಕ್ರಾಂತಿಕಾರ ಬೆಳವಣಿಗೆಯಾಗಿದೆಂದು ಹೇಳಿದರು.

ಹುಣಸೆಹಣ್ಣಿಗೆ ಹೆಚ್ಚು ಪ್ರಚಾರ ಸಿಗಲಿ

ಸಚಿವ ರಾಮಲಿಂಗಾರೆಡ್ಡಿ ಆಶಯ | ಮಾವು-ಹಲಸು ಹಾಗೂ ಹುಣಸೆಹಣ್ಣು ಮೇಳಕ್ಕೆ ಚಾಲನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಹಿಂದೆ ಗ್ರಾಮೀಣ ಭಾಗದ ರಸ್ತೆ ಬದಿಯಲ್ಲಿ ಸಾಲು ಸಾಲು ಹುಣಸೆ ಮರಗಳನ್ನು ಕಾಣಬಹುದಿತ್ತು. ಆದರೆ, ಈಗ ರಸ್ತೆ ಅಗಲೀಕರಣ ಇತ್ಯಾದಿ ಅಭಿವೃದ್ಧಿ ಕೆಲಸಗಳ ನಿಮಿತ್ತ ಹುಣಸೆ ಕಣ್ಮರೆಯಾಗುತ್ತಿವೆ ಎಂದು ಸಾರಿಗೆ ರಾಮಲಿಂಗಾರೆಡ್ಡಿ ಬೇಸರ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಹಾಪ್‌ಕಾಮ್ಸ್ ವತಿಯಿಂದ ಡಾ. ಎಂ.ಎಚ್. ಮರಿಗೌಡ ಫೌಂಡೇಶನ್ ಸಹಯೋಗದಲ್ಲಿ ಲಾಲ್‌ಬಾಗ್‌ನಲ್ಲಿರುವ ಹಾಪ್‌ಕಾಮ್ಸ್ ಕೇಂದ್ರ ಕಚೇರಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ

■ ಲಾಲ್‌ಬಾಗ್‌ನಲ್ಲಿ ಆಯೋಜನೆ

ಮಾವು-ಹಲಸು ಹಾಗೂ ಹುಣಸೆಹಣ್ಣು ಮೇಳ ಉದ್ಘಾಟಿಸಿ ಮಾತನಾಡಿದರು.

ಹಳ್ಳಿಗಳಲ್ಲಿ ಹುಣಸೆಗೆ ಪರ್ಯಾಯವಾಗಿ ಹಲವು ಬೆಳೆಗಳನ್ನು ಬೆಳೆಸುತ್ತಾರೆ. ಹುಣಸೆ ಬದಲಾಗಿ ಟೊಮ್ಯಾಟೊ ಬಳಸುವುದನ್ನು ಕಾಣಬಹುದು. ಹುಣಸೆಹಣ್ಣು ಆರೋಗ್ಯಕ್ಕೆ ತುಂಬ ಒಳ್ಳೆಯದು. ಆದ್ದರಿಂದ ಅದಕ್ಕೆ ಹೆಚ್ಚು ಹೆಚ್ಚು ಪ್ರಚಾರ ಸಿಗಲಿ. ರಾಜಧಾನಿಯಲ್ಲಿ ಇದೇ ಬಾರಿ ಪ್ರಪ್ರಥಮವಾಗಿ ಹುಣಸೆ ಹಣ್ಣು ಮಾರಾಟ ಆಯೋಜಿಸಿರುವುದು ವಿಶೇಷ ಎನಿಸಿದೆ. ಇನ್ನುಮುಂದೆ ಪ್ರತಿವರ್ಷವೂ ಇದು ಮುಂದುವರಿಯಲಿ ಎಂದು ಆಶಿಸಿದರು.

ಶಾಸಕ ಉದಯ್ ಗರುಡಾಚಾರ್ ಮಾತನಾಡಿ, ಚಿಕ್ಕಪೇಟೆ ಕ್ಷೇತ್ರಕ್ಕೆ ಹಾಗೂ ಹಾಪ್‌ಕಾಮ್ಸ್‌ಗೆ ಸಚಿವ ರಾಮಲಿಂಗಾರೆಡ್ಡಿ ಅವರ ಕೊಡುಗೆ ಅಪಾರವಾಗಿದೆ. ನಾನು ಕೂಡ ಹಣ್ಣುಗಳನ್ನು ಕೊಂಡುಕೊಳ್ಳಲು ಇಲ್ಲಿಗೆ ಬರುತ್ತೇನೆ. ಯಾಕೆಂದರೆ ಇಲ್ಲಿ 'ನಮ್ಮದು' ಎಂಬ ಭಾವವಿರುತ್ತದೆ. ಪ್ರತಿವರ್ಷದಂತೆ ಈ ವರ್ಷವೂ ಮಾವಿನ ಮೇಳ ಸಂಭ್ರಮದಿಂದ ಸಾಗುತ್ತಿದೆ ಎಂದರು.

ತೋಟಗಾರಿಕೆ ಇಲಾಖೆ ಮಾಜಿ ನಿರ್ದೇಶಕ ಡಾ. ಹನುಮಯ್ಯ ಮಾತನಾಡಿ, ಡಾ. ಎಂ.ಎಚ್. ಮರಿಗೌಡ ಅವರಿಂದಲೇ ಹುಣಸೆ ಹಣ್ಣು ಪ್ರಚಾರಕ್ಕೆ ಬಂತು. ಗೊಬ್ಬರ, ನೀರು ಇಲ್ಲದಿದ್ದರೂ ಬೆಳೆದು ಫಲಕೊಡುವ ಮರ ಇದಾಗಿದ್ದು, ಒಣ ಬೇಸಾಯಕ್ಕೆ ಇನ್ನಷ್ಟು ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ಗೋಪಾಲಕೃಷ್ಣ, ಮಾಜಿ ಅಧ್ಯಕ್ಷ ಶ್ರೀನಿವಾಸ್, ಮುಖಂಡರಾದ ನಾರಾಯಣಗೌಡ, ವೆಂಕಟೇಶ್, ಜೈಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



'ಸಸ್ಯಕಾಶಿ' ಲಾಲ್‌ಬಾಗ್‌ನ ಹಾಪ್‌ಕಾಮ್ಸ್ ಕೇಂದ್ರ ಕಚೇರಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಮಾವು-ಹಲಸು ಹಾಗೂ ಹುಣಸೆಹಣ್ಣು ಮೇಳಕ್ಕೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು. ಶಾಸಕ ಉದಯ್ ಗರುಡಾಚಾರ್, ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ಗೋಪಾಲಕೃಷ್ಣ, ಮಾಜಿ ಅಧ್ಯಕ್ಷ ಶ್ರೀನಿವಾಸ್ ಇತರರಿದ್ದರು.

31ರವರೆಗೆ ಮೇಳ

ತೋತಾಪುರಿ, ಬಾದಾಮಿ, ರಸಪೂರಿ, ಮಲ್ಲಿಕಾ, ಕೇಸರ್ ಸೇರಿ 15 ವಿಧದ ಮಾವಿನ ಹಣ್ಣುಗಳು ಮೇಳದಲ್ಲಿವೆ. 40 ರೂ. ಇದ್ದ ತೋತಾಪುರಿಗೆ ಮೇಳದ ಪ್ರಯುಕ್ತ 36 ರೂ. ಬೆಲೆ ನಿಗದಿಪಡಿಸಲಾಗಿದೆ. ಕೆ.ಜಿ.ಗೆ134 ರೂ. ಇದ್ದ ಬಾದಾಮಿಗೆ 120 ರೂ. ಇದೆ. ಹೀಗೆ ಶೇ.5 ರಿಂದ 10ರ ವರೆಗೆ ಮೇಳದಲ್ಲಿ ಹಣ್ಣುಗಳಿಗೆ ರಿಯಾಯಿತಿ ದೊರೆಯಲಿದೆ. ಮೇಳವು ಇದೇ 31ರವರೆಗೆ ನಡೆಯಲಿದೆ. ನಗರದ ಇತರೆಡೆ ಇರುವ ಹಾಪ್‌ಕಾಮ್ಸ್‌ಗಳಲ್ಲೂ ಮೇಳ ಇರಲಿದೆ.

> ರಾಜ್ಯದಲ್ಲಿ 500ಕ್ಕೂ ಅಧಿಕ ಮಾವಿನ ವಿಧಗಳಿವೆ. ಆದರೆ, ನಮಗೆ ವಾಣಿಜ್ಯ ವ್ಯಾಪಾರ ನಡೆಯುವುದು ಕೇವಲ 10-12 ವಿಧದ ಹಣ್ಣುಗಳಲ್ಲಿ ಮಾತ್ರ. ಅವೆಲ್ಲವೂ ಈ ಮೇಳದಲ್ಲಿದೆ. ದೇಶದಲ್ಲಿ 900ಕ್ಕೂ ಅಧಿಕ ವಿಧದ ಮಾವನ್ನು ನೋಡಬಹುದು. ಈ ಬಾರಿ ಇಳುವರಿ ಕಡಿಮೆ ಆಗಿದೆ. ರೈತರು ಪಡೆದ ಸಾಲವನ್ನು ಬಡ್ಡಿರಹಿತ ಮಾಡಲು ಸಂಪುಟದ ಮುಂದೆ ಪ್ರಸ್ತಾಪಿಸಲಾಗುವುದು. ರಾಜಧಾನಿಯಲ್ಲಿ ಆನ್‌ಲೈನ್ ಮೂಲಕ ಮಾವು ಮಾರಾಟಕ್ಕೆ ಉತ್ತೇಜನ ನೀಡಬೇಕು. ವಸತಿ ಸಮುಚ್ಚಯಗಳಲ್ಲಿ ಮಾವು ಮಾರಾಟ ವ್ಯವಸ್ಥೆಯನ್ನು ಹೆಚ್ಚಿಸಲು ವಿದ್ಯುತ್‌ಚಾಲಿತ ವಾಹನಗಳನ್ನು ಸಿಎಸ್‌ಆರ್ ನಿಧಿ ಮೂಲಕ ಕೊಡಲಾಗುವುದು.
>
> | ರಾಮಲಿಂಗಾರೆಡ್ಡಿ ಸಾರಿಗೆ ಸಚಿವ

ಐನೂರು ಟನ್ ಮಾವು ಮಾರಾಟ ಮಾಡುವ ಗುರಿ

ಈ ಬಾರಿ ಮೇಳದಲ್ಲಿ 500 ಟನ್‌ಗೂ ಹೆಚ್ಚು ಮಾವು ಮಾರಾಟದ ಗುರಿ ಇದೆ. ಕಳೆದ ಬಾರಿ 395 ಟನ್ ಮಾವು ಮಾರಾಟವಾಗಿತ್ತು. ಸಂಚಾರಿ ಮಾರಾಟದ ವ್ಯವಸ್ಥೆಯ ಮೂಲಕ ನೂರಾರು ವಸತಿ ಸಮುಚ್ಚಯಗಳನ್ನು ತಲುಪಿದ್ದು, 600ಕ್ಕೂ ತಾಣಗಳಲ್ಲಿ ವ್ಯಾಪಾರದ ಅವಕಾಶಗಳಿವೆ. ಹಾಪ್‌ಕಾಮ್ಸ್ ಇರುವ ಸೌಲಭ್ಯಗಳನ್ನು ಬಳಸಿಕೊಂಡೇ ಎರಡು ದಿನದಲ್ಲಿ 50 ವಸತಿ ಸಮುಚ್ಚಯಗಳಲ್ಲಿ 15-20 ಲಕ್ಷ ರೂ.ವರೆಗೆ ಆದಾಯ ಗಳಿಸಿದೆ. ರಜಾದಿನದಂದು 9 ಲಕ್ಷ ರೂ. ಸಂಗ್ರಹವಾದ ಉದಾಹರಣೆಯೂ ಇದೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

Viayavani Pg 06



ಧಾರವಾಡದಲ್ಲಿ ಮಂಗಳವಾರ ಮಾವು ಮೇಳದಲ್ಲಿ ಪ್ರದರ್ಶಿಸಿರುವ 'ಮಿಯಾ ಜಾಕಿ' ಮಾವು ಪ್ರಜಾವಾಣಿ ಚಿತ್ರ

ಒಂದು 'ಮಿಯಾ ಜಾಕಿ' ಮಾವಿಗೆ ₹10 ಸಾವಿರ

ಪ್ರಜಾವಾಣಿ ವಾರ್ತೆ

ಧಾರವಾಡ: ನಗರದ ತೋಟಗಾರಿಕೆ ಇಲಾಖೆ ಆವರಣದಲ್ಲಿ ಮಂಗಳವಾರ ಮಾವು ಮೇಳ ಆರಂಭವಾಗಿದ್ದು, 'ಮಿಯಾ ಜಾಕಿ' ಮಾವಿನ ಹಣ್ಣನ್ನು ಪ್ರದರ್ಶನಕ್ಕಿಡಲಾಗಿದೆ.

ಒಂದು ಹಣ್ಣಿನ ಬೆಲೆ ₹10 ಸಾವಿರ. ಜಪಾನ್ ದೇಶದ ಕಡುಕೆಂಪು ಸೇಬಿನ ತಳಿಯ ಈ ಹಣ್ಣನ್ನು ರೈತ ಪ್ರಮೋದ ಗಾಂವ್ಕರ ಅವರು ಕಲಕೇರಿಯ ತೋಟದಲ್ಲಿ ಬೆಳೆದಿದ್ದಾರೆ.

'2012ರಲ್ಲಿ ಮಹಾರಾಷ್ಟ್ರದ ರತ್ನಗಿರಿಯ ನರ್ಸರಿಯಿಂದ ಎರಡು ಗಿಡ ತಂದು ಬೆಳೆಸಿದ್ದೇನೆ. ಈ ವರ್ಷ 25 ಮಾವಿನ ಕಾಯಿ ಫಸಲು ಇದೆ. ಕಾಯಿ ಚೆನ್ನಾಗಿ ಬಲಿಯಲು 150 ದಿನ ಬೇಕು. ಹಣ್ಣು ಒಂದು ತಿಂಗಳವರೆಗೆ ಹಾಳಾಗುವುದಿಲ್ಲ' ಎಂದು ಪ್ರಮೋದ ಗಾಂವ್ಕರ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಹಣ್ಣು ಬಹಳ ಸಿಹಿಯಾಗಿದೆ. ಮುಂಬೈ, ಪುಣೆ ಮೊದಲಾದ ಕಡೆ ಗ್ರಾಹಕರು ಆನ್‌ಲೈನ್‌ನಲ್ಲಿ ಬುಕ್ ಮಾಡಿ, ಹಣ್ಣು ಖರೀದಿಸುತ್ತಾರೆ. ಧಾರವಾಡ ಭಾಗದ ಹವಾಮಾನಕ್ಕೆ ಈ ತಳಿಯ ಗಿಡಗಳು ಚೆನ್ನಾಗಿ ಬೆಳೆಯುತ್ತವೆ' ಎಂದರು.

Prajavani Pg 06

ಭತ್ತದ ದರ ಅರ್ಧಕ್ಕರ್ಧ ಕುಸಿತ!

Udayavani Pg 06

ಕಳೆದ ವರ್ಷ ಕ್ವಿಂಟಲ್ ಭತ್ತಕ್ಕೆ 3200, ಈ ಬಾರಿ 1600 ರೂ.ಗೆ ಕುಸಿತ | ಬೆಳೆಗಾರರು ಕಂಗಾಲು

ಆಂಧ್ರ, ತೆಲಂಗಾಣದಿಂದ ಭಾರೀ ಪ್ರಮಾಣದ ಭತ್ತ ಲಗ್ಗೆ | ಕಟಾವು ಬಾಕಿ ನಡುವೆ ಬೆಲೆ ಕುಸಿತ

■ ಎಚ್.ಕೆ.ನಟರಾಜ

ಉದಯವಾಣಿ ಸಮಾಚಾರ

ದಾವಣಗೆರೆ: ಬಹುತೇಕ ಅಗತ್ಯ ಆಹಾರ ಬೆಳೆಗಳು ಬೆಲೆ ಏರಿಕೆ ಬಿಸಿಯಲ್ಲಿರುವಾಗಲೇ ರಾಜ್ಯದಲ್ಲಿ ಭತ್ತದ ಬೆಲೆ ಮಾತ್ರ ಸರಾಸರಿ ಅರ್ಧಕ್ಕರ್ಧ ಕುಸಿದಿದ್ದು ಅನ್ನದಾತರು ಅಕ್ಷರಶಃ ಕಂಗಾಲಾಗಿದ್ದಾರೆ.

ಕಳೆದ ವರ್ಷ ರಾಜ್ಯದ ರೈತರು ಬೇಸಿಗೆ ಭತ್ತವನ್ನು ಒಂದು ಕ್ವಿಂಟಲ್‌ಗೆ 3200 ರೂ.ಗೆ ಮಾರಾಟ ಮಾಡಿದ್ದರು. ಆದರೆ, ಪ್ರಸ್ತುತ ಕ್ವಿಂಟಲ್ ಭತ್ತ 1600ರಿಂದ 1800 ರೂ. ಗಳಿಗೆ ಇಳಿಕೆಯಾಗಿರುವುದು ಬೆಳೆಗಾರರನ್ನು ಕಂಗೆಡಿಸಿದೆ. ವಾರದ ಹಿಂದೆ ಮಾರುಕಟ್ಟೆಯಲ್ಲಿ ಭತ್ತದ ಬೆಲೆ ತೀರಾ ಕುಸಿತ ಕಂಡು ಕ್ವಿಂಟಲ್‌ಗೆ 1500 ರಿಂದ 1600 ರೂ. ಆಗಿತ್ತು. ಇದೀಗ ತುಸು ಚೇತರಿಕೆಗೊಂಡು ಕ್ವಿಂಟಲ್‌ಗೆ1800-1900 ರೂ.ಗೆ ಬಂದು ತಲುಪಿದೆ.

ಕಳೆದ 15 ದಿನಗಳ ಹಿಂದೆ ಬೇಸಿಗೆ ಭತ್ತದ ಕಟಾವು ಆರಂಭವಾಗಿದ್ದು ಕಟಾವು ಇನ್ನೂ ಬಾಕಿ ಇರುವಾಗಲೇ ಮಾರುಕಟ್ಟೆಯಲ್ಲಿ ಭತ್ತದ ಬೆಲೆ ಪಾತಾಳ ಕಂಡಿದೆ. ಈ ಬಾರಿ 9 ಲಕ್ಷ ಕ್ವಿಂಟಲ್ ಬರುವ ನಿರೀಕ್ಷೆ ಇದ್ದು ಮಾರುಕಟ್ಟೆಯಲ್ಲಿ ಭತ್ತ ಬೇಡಿಕೆ ಕಳೆದುಕೊಂಡಿದೆ.



ವಿವಿಧ ತಳಿಗಳ ಭತ್ತದ ದರ

ತಳಿ	ಕಳೆದ ವರ್ಷ	ಈ ವರ್ಷ
ಕಾವೇರಿ ಸೋನಾ	₹2650	₹1800
ಆರ್‌ಎನ್‌ಆರ್	₹2600	₹1950
ಗಿಡ್ಡ ಆರ್‌ಎನ್‌ಆರ್	₹2500	₹1800
ಸೋನಾಮಸೂರಿ	₹2800	₹1800

ಭತ್ತದ ದರ ಕುಸಿತಕ್ಕೆ ಕಾರಣವೇನು?

ನೆರೆಯ ತೆಲಂಗಾಣ, ಆಂಧ್ರದಲ್ಲಿ 60 ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತಿದ್ದು, ಬೇಸಿಗೆ ಹಂಗಾಮಿನ ಕಟಾವು ಪೂರ್ಣವಾಗಿ ರಾಜ್ಯದ ಮಾರುಕಟ್ಟೆ ಪ್ರವೇಶಿಸಿದೆ. ರಾಜ್ಯದಲ್ಲಿ ಬೇಸಿಗೆ ಭತ್ತ ಪೂರ್ಣ ಪ್ರಮಾಣದಲ್ಲಿ ಮಾರುಕಟ್ಟೆಗೆ ಬರುವ ಮೊದಲೇ ನೆರೆಯ ರಾಜ್ಯಗಳ ಭತ್ತ ಮಾರುಕಟ್ಟೆ ಪ್ರವೇಶಿಸಿರುವುದೇ ದರ ಕುಸಿತಕ್ಕೆ ಪ್ರಮುಖ ಕಾರಣ. ರಾಷ್ಟ್ರ ಮಟ್ಟದಲ್ಲಿ ಅಕ್ಕಿ ರಫ್ತು ಕಡಿಮೆಯೂ ಈ ಬಾರಿ ಕುಸಿತ ಕಂಡಿದೆ ಎನ್ನುತ್ತಾರೆ ಕೃಷಿ ಮಾರುಕಟ್ಟೆ ವಿಶ್ಲೇಷಕರು.

ಭತ್ತದ ದರ ಕುಸಿದರೂ ಇಳಿಯದ ಅಕ್ಕಿ ಬೆಲೆ

ಭತ್ತದ ದರ ಅರ್ಧಕ್ಕರ್ಧ ಕುಸಿದರೂ ಇದರ ಲಾಭ ಮಾತ್ರ ಗ್ರಾಹಕರಿಗೆ ದಕ್ಕುತ್ತಿಲ್ಲ. ಹೊಸ ಅಕ್ಕಿ ದರ ಮಾರುಕಟ್ಟೆಯಲ್ಲಿ ಸರಾಸರಿ ಕೆ.ಜಿ.ಗೆ 45-50 ರೂ.ಗೆ ಮಾರಾಟವಾಗುತ್ತಿದೆ. ಇನ್ನು ಹಳೆಯ ಅಕ್ಕಿ ಆರ್‌ಎನ್‌ಆರ್ ಸ್ಟೀಮ್ ಕೆ.ಜಿ.ಗೆ 45-48 ರೂ., ಆರ್‌ಎನ್‌ಆರ್ ರಾ ರೈಸ್ ಕೆ.ಜಿ.ಗೆ 60-65, ಸೋನಾಮಸೂರಿ 50-55 ರೂ., ಜೀರಾ ರೈಸ್ ಕೆ.ಜಿ.ಗೆ 70-75 ರೂ.ಗೆ ಮಾರಾಟವಾಗುತ್ತಿದೆ. ಒಟ್ಟಾರೆ ಭತ್ತದ ದರ ಇಳಿಕೆ ಲಾಭ ಮಧ್ಯವರ್ತಿಗಳ ಜೇಬು ತುಂಬಿಸುತ್ತಿದೆ.

ಕೇಂದ್ರ ಸರ್ಕಾರ ಕ್ವಿಂಟಲ್ ಭತ್ತಕ್ಕೆ 2320 ರೂ. ಬೆಂಬಲ ಘೋಷಣೆ ಮಾಡಿದೆ. ಆದರೆ, ಮಾರುಕಟ್ಟೆಯಲ್ಲಿ ಭತ್ತದ ದರ ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ಮಾರಾಟವಾಗುತ್ತಿದೆ. ಸರ್ಕಾರದಿಂದ ದರ ನಿಯಂತ್ರಣ ಹಾಗೂ ಸ್ಥಿರತೆಗೆ ಕಠಿಣ ಕ್ರಮವಾಗಿಲ್ಲ ಎಂಬುದು ಅನ್ನದಾತರ ಆರೋಪ.

The atypical apple trees: Of an orchard in Bagalkot

For the last one-and-a-half years, a seven-acre plot of land in Kulali village, Mudhol taluk, has become a picnic spot for many. This land belongs to Shrishail Teli, a farmer in Bagalkot whose work has drawn national praise and curious visitors alike. During November and December, hundreds of people flock to his field to see, in amazement, a fruit synonymous with snow-clad mountains. But here, the apple grows on plain, dry land.

The farm drew large numbers even before Prime Minister Narendra Modi praised the farmer, on the 121st episode of *Mann Ki Baat*. Since then, several politicians, religious leaders and farmers have been visiting his farm to see bunches of the fruit. A few of them return disappointed, as the season (March-April) is that of flowers, and not fruit.

For the last 12 years, Shrishail cultivated grapes in his field. While he earned an adequate income from it, he was not happy with the returns for the effort put in. Two years ago, he decided to take a risk and started cultivating apples in his field. He started with some research online. Following this, he consulted apple growers from other dry areas of the state (Chitradurga and Vijayapura) and Maharashtra. Then, he procured nearly 2,670 saplings of three varieties of apple (Anna, HRMN-99 and Dorsett Golden) from Shirdi and Pune.





Apples growing at Shrishail's farm in Bagalkot.

"Many called me a fool for trying to grow a temperate fruit in a high-temperature area," says Shrishail. He says 12 years of experience in the cultivation of grapes had taught him that with hard work and complete dedication, he could successfully nurture the apple saplings. "In the worst-case scenario, I could have sustained a Rs four-to-six-lakh loss for planting apple saplings. However, if I succeeded, I was sure of making good money," he says. As they say, luck favours the brave; he ended up earning Rs 15 lakh from the first two yields.

He says he harvested at least 15-20 kg of fruit from every tree in the second season, and sold at least 20 tonnes of apples in the local market for Rs 85 to Rs 110 per kg. Another five tonnes of fruit were given to visitors who visited his field to taste. "I had also set aside two to three tonnes of fruits for birds and animals," he says.

Shrishail says that apart from small quantities of chemical supplements, he relied on organic fertiliser and 'jeevamrutha', a liquid fertiliser made from cow dung and other ingredients.

To ensure he is not in complete loss during the two years the apple saplings take to start fruiting, he also planted other crops in the intermittent space and harvested 300 tonnes of watermelon and 150 tonnes of muskmelon and sweet corn each.

Arvind Balaganur, assistant horticulture officer, Mudhol, says Shrishail is a progressive farmer who has been experimenting in his fields for many years. "Cultivating apples in a climate which reaches 35-38 degrees Celsius during summer is not an easy task. Yet, with his determination and hard work, he has proved that nothing is impossible," Arvind says. He adds that in the coming days, the farmer's income could multiply, as the plants have grown completely and require minimum care.

Dareppa Tonne, a resident of Kulali village, says the apples grown by Shrishail were crispy and juicy. "Even without keeping them in the fridge, we were able to enjoy it for 15 days as it did not rot," he says.

B Fakrudin, director of research, University of Horticultural Sciences, Bagalkot, commends the efforts of Shrishail. However, he is wary of other local farmers following suit, as the chances of success are low.

Almost a decade ago, the university experimented with cultivating apples in the region. However, there was limited success, forcing the university to drop its plans to take up cultivation of the fruit on a large scale.

"The university is in touch with Shrishail and is monitoring the progress of his efforts. We will study the entire process and draw our scientific conclusion if the cultivation of this fruit here can result in commercial success for farmers," says Fakrudin.

Dec Hrd Pg 13

ಚುಂಚನಕಟ್ಟೆ ಎಪಿಎಂಸಿ ಆವರಣದಲ್ಲಿರುವ ಜಾನುವಾರು ಸಂತೆಗೆ ಮತ್ತೆ ಜೀವಕಳೆ

ನಾಟಿ ಹಸುಗಳಿಗೆ ಎಲ್ಲಿಲ್ಲದ ಬೇಡಿಕೆ



ಹುಟುಕಾಟ

ಎಪಿಎಂಸಿ ಆವರಣದಲ್ಲಿ ನಾಟಿ ಹಸು, ನಾಟಿ ಎತ್ತು, ಉಳುವ ಎತ್ತುಗಳಿಗಾಗಿ ರೈತರು ಹುಡುಕಾಟ ಆರಂಭಿಸಿದ್ದಾರೆ. ಆದ್ದರಿಂದ ಮಾರುಕಟ್ಟೆಯಲ್ಲಿ ಉಳುವ ಉತ್ತಮ ಎತ್ತುಗಳಿಗೆ ಬೇಡಿಕೆ ಹೆಚ್ಚಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ರೈತರು ವರ್ಷಪೂರ್ತಿ ತಮ್ಮ ಕೈ ಹಿಡಿದು ಉಳುವ ಎತ್ತುಗಳ ಹುಡುಕಾಟದಲ್ಲಿದ್ದಾರೆ.

ಮಣಿಕಂಠ ಸಿ.ಆರ್. ಚುಂಚನಕಟ್ಟೆ

ಸಾಲಿಗ್ರಾಮ: ಮಾನ್ಸೂನ್ ಮುಂಗಾರು ಹಂಗಾಮು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಚುಂಚನಕಟ್ಟೆ ಎಪಿಎಂಸಿ ಆವರಣದಲ್ಲಿರುವ ಜಾನುವಾರು ಸಂತೆಗೆ ಮತ್ತೆ ಜೀವಕಳೆ ಬಂದಂತಾಗಿದೆ. ಆದರೆ ಜಿಲ್ಲೆಯಾದ್ಯಂತ ಸುರಿದ ಮಳೆ ಅನ್ನದಾತರ ಬಿತ್ತನೆ ಕೃಷಿ ಚಟುವಟಿಕೆಗೆ ಭರ್ಜರಿ ಆರಂಭ ನೀಡಿದ ಬೆನ್ನಲ್ಲೇ ರೈತರ ಜೀವನಾಡಿ ಎತ್ತುಗಳಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ.

ಪ್ರಸಕ್ತ ವರ್ಷ ಮುಂಗಾರು ಆರಂಭಕ್ಕೂ ಮುನ್ನ ಮಳೆರಾಯ ದರ್ಶನ ನೀಡಿದ ಹಿನ್ನೆಲೆ ರೈತರ ಮುಖದಲ್ಲಿ ಮತ್ತೆ ಮಂದಹಾಸ ಮೂಡಿದಂತಾಗಿದ್ದು, ಈ ಬಾರಿ ಉತ್ತಮ ಮಳೆಯಾಗುವುದೆಂಬ ಆಶಾಭಾವನೆಯಿಂದ ಕೂಡಿರುವ ಅನ್ನದಾತರು ಹೊಲ,ಗದ್ದೆಗಳಲ್ಲಿ ಮುಂಗಾರು ಹಂಗಾಮಿನ ಬಿತ್ತನೆಗೆ ಸಿದ್ಧತೆಯ ಪೂರ್ವ ತಯಾರಿ ಗರಿಗೆದರಿದ್ದು, ರೈತರು ಎತ್ತುಗಳ ಖರೀದಿಗೆ ಮುಂದಾಗಿದ್ದಾರೆ. ತಮಗೆ ಬೇಕಾಗುವ ಉಳುಮೆ ಎತ್ತುಗಳನ್ನು ಖರೀದಿಸಲು ಈ ಭಾಗದ ಏಕೈಕ ದೊಡ್ಡ ಜಾನುವಾರು ಸಂತೆಯಾಗಿರುವ ಚುಂಚನಕಟ್ಟೆ ಜಾನುವಾರ ಸಂತೆಗೆ ಜಿಲ್ಲೆ ಸೇರಿದಂತೆ ಇತರೆ ಜಿಲ್ಲೆಯ ನಾನಾ ಭಾಗಗಳ ಹಾಗೂ ಉತ್ತರ ಕರ್ನಾಟಕದ ರೈತರು ಪ್ರತಿ ಬುಧವಾರ ಎ.ಪಿ.ಎಂ.ಸಿ ಮಾರುಕಟ್ಟೆ ಆವರಣಕ್ಕೆ ಮುಂಜಾನೆ 4 ಘಂಟೆಗೆ ಆಗಮಿಸಿ ಮದ್ಯಾಹ್ನದವರೆಗೂ ಖರೀದಿಯ ಪ್ರಕ್ರಿಯೆ ಬಲು ಜೋರಾಗಿದ್ದು ಉತ್ತಮ ಎತ್ತುಗಳ ವ್ಯಾಪಾರ ವಹಿವಾಟು ನಡೆಸುತ್ತಿರುವ ದೃಶ್ಯ ಕಂಡುಬರುತ್ತಿದೆ. ಕೃಷಿ ಚಟುವಟಿಕೆಗೆ ಎತ್ತುಗಳೇ ಜೀವಾಳ: ಆಧುನಿಕ ಯುಗದಲ್ಲಿ ಟ್ಯಾಕ್ಟರ್ ಹಾಗೂ ಹಲವಾರು ಯಂತ್ರಗಳ ಬಳಕೆ ಮಾಡುವ ಸಂದರ್ಭದಲ್ಲಿಯೂ ರೈತರ ಆಪ್ತಮಿತ್ರ ಎತ್ತುಗಳ ಬೇಡಿಕೆ ಕಡಿಮೆಯಾಗಿಲ್ಲ. ಹೆಚ್ಚು ಜಮೀನು ಹೊಂದಿದವರು ಮಾತ್ರ ಟ್ಯಾಕ್ಟರ್ ಗಳ ಮೊರೆ ಹೋಗುತ್ತಾರೆ. ಆದರೆ, ಕಡಿಮೆ ಜಮೀನು ಇರುವವರು ಎತ್ತುಗಳ ಮೂಲಕ ಉಳುಮೆ ಮಾಡುತ್ತಾರೆ. ಕೆಲವು ಭಾಗದಲ್ಲಿ ಟ್ಯಾಕ್ಟರ್‌ಗಳು ಇದ್ದರು ಎತ್ತುಗಳ ಮೂಲಕ ಬಿತ್ತನೆ ಮಾಡಿದರೆ ಉತ್ತಮ ಫಸಲು ಬರುತ್ತದೆ ಎಂಬುದು ರೈತರ ಅಭಿಪ್ರಾಯವಾಗಿದೆ. ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಎತ್ತುಗಳ ಬೇಡಿಕೆ ಕಡಿಮೆಯಾಗುವುದಿಲ್ಲ ಎನ್ನುತ್ತಾರೆ ರೈತರು.

50 ಸಾವಿರದಿಂದ 3 ಲಕ್ಷ: ನಾಟಿ ಎತ್ತುಗಳು 40 ಸಾವಿರದಿಂದ ಸುಮಾರು 1.5 ಲಕ್ಷ ರೂ. ಗಳು, ಇನ್ನು ನಾಟಿ ಹಸುಗಳು 50 ರಿಂದ 1 ಲಕ್ಷ ರೂ. ಗಳಿಗೆ ಮಾರಾಟವಾದರೆ. ಇಲಾತಿಗಿದ್ದ 50 ರಿಂದ 1 ಲಕ್ಷದವರೆಗೂ ಮಾರಾಟ ನಡೆಸುತ್ತಿದ್ದು. ಉತ್ತಮ ತಳಿಯ ನಾಟಿ ಎತ್ತುಗಳು ಬರೋಬ್ಬರಿ 3 ಲಕ್ಷ ರೂಗಳವರೆಗೂ ಮಾರಾಟವಾಗುತ್ತಿವೆ. ಜತೆಗೆ ಜಾನುವಾರು ಸಂತೆಗೆ ಬರುತ್ತಿರುವ ನಾಟಿ ಜೋಡೆತ್ತುಗಳಿಗೆ ಫುಲ್ ಡಿಮ್ಯಾಂಡ್ ಆಗಿ ವ್ಯಾಪಾರ ನಡೆಯುತ್ತಿದೆ ಎನ್ನುತ್ತಿದ್ದಾರೆ ರೈತರು.

Hosadiganta Pg 10

Eco times Pg 12

How healthy are mangoes?



PIC: GETTY IMAGES

JUST 1 QUESTION

The mango, the 'king of fruits', is rich in vitamin C and potassium. But it is also high in sugar. So, should you cut back on mangoes this season?

A peeled mango contains about 23 grams of sugar, which is more than twice what you get in a typical store-bought chocolate chip cookie. However, because this is natural sugar, it won't spike your blood glucose the way added sugar in cookies would, said Jessica Higgins, a New York, US-based dietitian. That's because your body has to break down the beneficial fibre in a mango to access the fruit's sugar. This takes time, which gives your body a chance to gradually process the glucose. In a cookie, she said, the refined sugar is immediately available, which is why it can cause a spike.

An average mango would contain about 20 per cent of your daily fibre needs, said Stephanie Rogus, a nutrition specialist at Texas A&M University, US. Mangoes aren't quite as high in fibre as apples or pears — in part because we don't eat the fibrous skin, she said.

But this much fibre would go a long way in keeping your blood cholesterol in check and also support gut bacteria.

Its vitamin C and potassium levels are also up there with the best. Half a mango contains 61 milligrams of vitamin C, similar to what you'd get from an orange or a grapefruit. And while bananas are the most potassium-rich tropical fruit, mangoes aren't that far behind. Half a mango contains 282 milligrams; a medium-sized banana has 422.

– The New York Times